25. ಏತ ನೀರಾವರಿ ಯೋಜನೆ ಕಾಟ್ಟೀ ತಾ. ಕಾರವಾರ
26. ಏತ ನೀರಾವರಿ ಯೋಜನೆ ಸಿದ್ದಾರ ತಾ. ಕಾರವಾರ
27. ಏತ ನೀರಾವರಿ ಯೋಜನೆ ವೈಲವೆದೇ ತಾ. ಕಾರವಾರ
28. ಏತ ನೀರಾವರಿ ಯೋಜನೆ ಕೆರವಡಿ ತಾ. ಕಾರವಾರ
29. ಏತ ನೀರಾವರಿ ಯೋಜನೆ ಕಾತಾರ ತಾ. ಕಾರವಾರ
30. ಏತ ನೀರಾವರಿ ಯೋಜನೆ ಕಲ್ಲೂಳ್ಳಿ ತಾ. ಮುಂಡಗೂಡ
31. ಏತ ನೀರಾವರಿ ಯೋಜನೆ ಉಗ್ಗಿನಕೆರೆ ತಾ. ಮುಂಡಗೂಡ
32. ಏತ ನೀರಾವರಿ ಯೋಜನೆ ಗುಂಡಾಪೂರ ತಾ. ಶಿರ್ಸಿ
33. ಏತ ನೀರಾವರಿ ಯೋಜನೆ ಭವಾನಿಗೊಂಡ ತಾ. ಶಿರ್ಸಿ
34. ಏತ ನೀರಾವರಿ ಯೋಜನೆ ಅಡೋಲಿ ತಾ. ಸುಪಾ
35. ಏತ ನೀರಾವರಿ ಯೋಜನೆ ಗುಳ್ಳಾಪೂರ ತಾ. ಯಲ್ಲಾಪುರ.

ಗುಬ್ಬಿ ವೀರಣ್ಣನವರ ಹೆಸರಿನಲ್ಲಿನ ಪ್ರಶಸ್ತಿಗಳು.

3041-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಮಹಾನ್ ರಂಗಭೂಮಿ ನಟರಾದ ಗುಬ್ಬಿ ವೀರಣ್ಣನವರ ಜನ್ಮ ಶತಾಬ್ಧಿ ಆಂಗವಾಗಿ ಸರ್ಕಾರ ರಂಗಭೂಮಿಯಲ್ಲಿ ಅನನ್ಯ ಸೇವೆ ಸಲ್ಲಿಸಿದವರಿಗೆ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಬಗ್ಗೆ ಪರಿಶೀಲಿಸುತ್ತಿದೆಯೇ?*

ಆ) *ಸರ್ಕಾರ ಈಗಾಗಲೇ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ರಂಗಮಂದಿರವನ್ನು ನಿರ್ಮಿಸುತ್ತಿರುವುದರಿಂದ ಪ್ರಶಸ್ತಿಯನ್ನು ಸಹ ಅವರ ಹೆಸರಿನಲ್ಲಿ ಪ್ರಾರಂಭಿಸಿದರೆ ಈ ಮಹಾನ್ ನಾಟಕಕಾರರನ್ನು ಗೌರವಿಸಿದಂತಾಗುವುದಿಲ್ಲವೇ?*

ಇ) *ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?*

ಶ್ರೀ ಎಸ್. ರಮೇಶ್ (ಯುವಜನಸೇವಾ, ಕ್ರೀಡಾ, ಕನ್ನಡ ಸಂಸ್ಕೃತಿ ಸಚಿವರು)

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

2988-ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಪ್ರವಾಸೋದ್ಯಮ ಇಲಾಖೆಯಿಂದ ದಕ್ಷಿಣಕನ್ನಡದಲ್ಲಿ ಈತನಕ ಯಾವ ಯಾವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹಾಗೂ ಇದಕ್ಕೆ ತಗುಲಿದ ವೆಚ್ಚ ಎಷ್ಟು.*

ಆ) *ಪ್ರಸ್ತುತ ವರ್ಷದಲ್ಲಿ ಯಾವ ಸ್ಥಳಗಳ ಅಭಿವೃದ್ಧಿಗೆ ಯೋಜಿಸಲಾಗಿದೆ. ಹಾಗೂ ಇದಕ್ಕೆ ತಗಲುವ ವೆಚ್ಚ ಎಷ್ಟು ಈ ಯೋಜನೆಗಳ ರೂಪ ರೇಷೆಗಳೇನು?*

ಇ) *ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡ ಕಾರ್ಯಕ್ರಮಗಳೇನು?*

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಪ್ರವಾಸೋದ್ಯಮ ಇಲಾಖೆಯು ಈ ಕೆಳಕಂಡ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲಾಗಿದೆ.

ಸೌಲಭ್ಯ	ವೆಚ್ಚ.
1) ಪ್ರವಾಸಿ ಗೃಹಗಳು, ಮೂಡಬಿದರೆ.	19.15 ಲಕ್ಷ ರೂ.
2) ಪ್ರವಾಸಿ ಗೃಹಗಳು, ಕಾರ್ಕಳ	
3) ಬೇಂದ್ರೆ ತೀರ್ಥದಲ್ಲಿ ಪ್ರವಾಸಿ ಸೌಲಭ್ಯ	1.99 ಲಕ್ಷ ರೂ.
4) ಮೂಡಬಿದರೆಯ ಸಾವಿರಕಂಬದ ಬಸದಿಗೆ ಹೊನಲು ಬೆಳಕು ವ್ಯವಸ್ಥೆ.	2.00 ಲಕ್ಷ ರೂ.
5) ಕಾರ್ಕಳದ ಗೊಮ್ಮಟನ ವಿಗ್ರಹಕ್ಕೆ ಹೊನಲು ಬೆಳಕು ವ್ಯವಸ್ಥೆ	0.76 ಲಕ್ಷ ರೂ.

ಆ) ಪ್ರಸ್ತುತ ವರ್ಷದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

1) ಶಿರಾಡಿಯಲ್ಲಿ ಹೆದ್ದಾರಿ ಸೌಲಭ್ಯದ ನಿರ್ಮಾಣ ವೆಚ್ಚ -9.99 ಲಕ್ಷ ರೂ.ಗಳು.
2) ಮರವಂತೆಯಲ್ಲಿ ಕಡಲು ತೀರ ತಂಗುದಾಣದ ನಿರ್ಮಾಣ.-ವೆಚ್ಚ 45 ಲಕ್ಷ ರೂ.ಗಳು.

ಈ ಮೇಲ್ಕಂಡ ಎರಡು ಯೋಜನೆಗಳು ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು.

ಇ) ಪ್ರವಾಸೋದ್ಯಮ ಇಲಾಖಾವತಿಯಿಂದ ಯಾವ ಕಾರ್ಯಕ್ರಮವು ಅಪೂರ್ಣಗೊಂಡಿರುವುದಿಲ್ಲ.

ಪತ್ರಿಕೆಗಳಿಗೆ ಸರ್ಕಾರಿ ಜಾಹಿರಾತಿಗೋಸ್ಕರ ಆದ ವೆಚ್ಚ.

3376-ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ 1990-91ರಲ್ಲಿ ದಿನಪತ್ರಿಕೆ ವಾರ ಪತ್ರಿಕೆಗಳಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಪತ್ರಿಕೆಗಳಿಗೆ ಸರ್ಕಾರದ ವತಿಯಿಂದ ಕೊಟ್ಟ ಜಾಹೀರಾತಿನ ಒಟ್ಟು ವೆಚ್ಚವೆಷ್ಟು? ಪ್ರತಿಯೊಂದು ಪತ್ರಿಕೆಗಳಿಗೆ ಕೊಟ್ಟ ಹಣದ ವಿವರಗಳನ್ನು ಒದಗಿಸುವುದು.

ಆ) ಜಿಲ್ಲಾಮಟ್ಟದಲ್ಲಿರುವ ದಿನಪತ್ರಿಕೆಗಳಿಗೆ ಸರ್ಕಾರದ ಜಾಹೀರಾತಿನಿಂದ ಖರ್ಚಾಗಿರುವ ಒಟ್ಟು ಹಣವೆಷ್ಟು?

ಇ) ಜಿಲ್ಲಾಮಟ್ಟದ ಪತ್ರಿಕೆಗಳಿಗೆ ಸರ್ಕಾರದವರು ಕೊಡುತ್ತಿರುವ ಸೌಲಭ್ಯಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು)

ಆ) 1990-91ರಲ್ಲಿ ದಿನಪತ್ರಿಕೆಗಳಿಗೆ ರೂ. 94,44,689-30 1990-91ರಲ್ಲಿ ವಾರಪತ್ರಿಕೆಗಳಿಗೆ ರೂ.2,51,752-00ಅನುಬಂಧ1ಮತ್ತು 2ರಲ್ಲಿರುವ ಪ್ರಕಾರ ಪತ್ರಿಕಾವಾರು ವಿವರಗಳನ್ನು ಸದನದ ಮೇಜಿನ ಮೇಲಿಡಲಾಗಿದೆ.

ಇ) ಒಟ್ಟು ರೂ. 54,46,623-00